## ರಾಜ್ಯದಲ್ಲಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆ ಅನುಷ್ಠಾನ

4(5) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೆ ಆರ್.ಇ.ಸಿ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆ) ಯಡಿಯಲ್ಲಿ ಕೈಗೊಂಡಿರುವ ವಿವಿಧ ಪ್ರಗತಿ ಕಾರ್ಯಗಳೇನು?

ಆ) ಇದಕ್ಕಾಗಿ ರಾಜ್ಯಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು?

ಇ) ಈ ಯೋಜನೆ ಅನುಷ್ಠಾನ ವಿಚಾರ ಕುರಿತು ಸರ್ಕಾರವು ಗ್ಯಾರಂಟಿ ನೀಡದಿರುವುದರಿಂದ ಯೋಜನೆ ಮಂದಗತಿಯಲ್ಲಿ ಸಾಗಿರುವ ವಿಚಾರದ ಬಗ್ಗೆ ಸರ್ಕಾರದ ನಿಲುವೇನು?

ಈ) ಕೊಡುಗೆ ಜಿಲ್ಲೆಗೆ ಆರ್.ಇ.ಸಿ.ಯಲ್ಲಿ ಬಿಡುಗಡೆಯಾದ ಹಣವೆಷ್ಟು?

ಉ) ಈ ಹಣದಲ್ಲಿ ಜಿಲ್ಲೆಯ ಎಷ್ಟು ಗ್ರಾಮಗಳಿಗೆ ಹಣ ಒದಗಿಸಲಾಗಿದೆ ತಾಲ್ಲೂಕುವಾರು ವಿವರವನ್ನು ನೀಡುವುದು;

ಊ) ಇನ್ನೂ ಎಷ್ಟು ಗ್ರಾಮಗಳನ್ನು ಈ ಯೋಜನೆಗಾಗಿ ಗುರುತಿಸಲಾಗಿದೆ?

ಶ್ರೀ ಬಸವರಾಜ ಹೆಚ್ ಪಾಟೀಲ್ ( ಇಂಧನ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೆ 31-3-2002 ರವರೆಗೂ (1991 ಜನಗಣತಿ ಪ್ರಕಾರ) 26764 ಹಳ್ಳಿಗಳ ವಿದ್ಯುದ್ದೀಕರಣವಾಗಿದೆ.

1. 31-3-2002ರವರೆಗೆ ವಿದ್ಯುದ್ದೀಕರಣವಾದ (ಆರ್.ಇ.ಸಿ.ಎಲ್) ಹ್ಯಾಮ್ಲೇಟ್‌ಗಳ ಒಟ್ಟು ಸಂಖ್ಯೆ 21284.
2. 1-4-2002 ರಲ್ಲಿ ಇದ್ದಂತೆ ನೀರಾವರಿ ಪಂಪ್ ಸೆಟ್‌ಗಳ (ಆರ್.ಸಿ.ಎಲ್.) ಮತಿಯಿಂದ ವಿದ್ಯುದ್ದೀಕರಣವಾದ ಒಟ್ಟು ಸಂಖ್ಯೆ 683835.
3. 1-4-2002 ರಲ್ಲಿ ಇದ್ದಂತೆ ಸರ್ವೀಸ್ ಆದ ಪಿ.ಎಸ್.ಐ. ಸ್ಕೀಂಗಳ (ಆರ್.ಇ.ಸಿ.ಎಲ್.) ಸ್ಟೇಷನ್ ಒಟ್ಟು ಸಂಖ್ಯೆ 129.
4. 1-4-2002 ರಲ್ಲಿ ಇದ್ದಂತೆ ಕುಟೀರ ಜ್ಯೋತಿ ಸ್ಥಾವರಗಳ ಸ್ಥಾಪನೆ ಒಟ್ಟು ಸಂಖ್ಯೆ 892999.

ಆ) ರೂ. 1413.24 ಕೋಟಿ ಹಣವು ಆರ್.ಇ.ಸಿ.ಎಲ್. ನಿಂದ ಕೆ.ಪಿ.ಟಿ.ಸಿ.ಎಲ್. ಗೆ ಬಿಡುಗಡೆಯಾಗಿರುತ್ತದೆ.

ಇ) ಕಳೆದ ವರ್ಷದ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿನ ಆರ್.ಇ.ಸಿ. ಯೋಜನೆಗೆ ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ಖಾತ್ರಿ ದೊರೆತಿಲ್ಲವಾದ್ದರಿಂದ ಕೆಲಸಗಳು ಕುಂಠಿತಗೊಂಡಿವೆ. ಹಾಗೂ

ಸದರಿ ಕಾಮಗಾರಿಗಳು 1-6-2002 ರಿಂದ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವುದರಿಂದ ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯವರಿಗೆ ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಿ ಕೊಟ್ಟಿರುವುದರಿಂದ, ಅವರು ಮುಂದಿನ ಕ್ರಮ ತೆಗೆದು ಕೊಳ್ಳುವರು.

ಈ) ಕೊಡಗು ಜಿಲ್ಲೆಗೆ ಆರ್.ಇ.ಪಿ.ಯಲ್ಲಿ ರೂ. 3081.39 ಲಕ್ಷಗಳು ಮಂಜೂರಾತಿಯಾಗಿದೆ.

| ಉ) ತಾಲ್ಲೂಕು | ಗುರುತಿಸಲಾಗಿದ್ದ ಹ್ಯಾಮ್ಲೆಟ್ ಹರಿಜನ ಬಸ್ತಿ: ಜನತಾ ಕಾಲೋನಿ: ಸಂಖ್ಯೆ |
|---|---|
| 1. ಮಡಿಕೇರಿ | 31 |
| 2. ವಿರಾಜಪೇಟೆ | 29 |
| 3. ಸೋಮವಾರಪೇಟೆ | 63 |
| ಒಟ್ಟು | 123 |

ಊ) ಇನ್ನೂ ವಿದ್ಯುದ್ದೀಕರಣವಾಗದೇ ಇರುವ ಹ್ಯಾಮ್ಲೆಟ್: ಹರಿಜನ ಬಸ್ತಿ: ಜನತಾ ಕಾಲೋಜನಿಗಳ ವಿದ್ಯುದ್ದೀಕರಣ ಸಂಬಂಧ, ಯೋಜನೆ ವರದಿಯನ್ನು ತಯಾರಿಸಿ, ಆರ್.ಇ.ಪಿ. ನವದೆಹಲಿಯಿಂದ ಸಾಲ ಮಂಜೂರಾತಿ ಪಡೆದು ಮೇಲೆ ತಿಳಿಸಿದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಜಸರ್ಕಾರ ಖಾತ್ರಿ ಪಡೆದು ವಿದ್ಯೂದೀಕರಣ ಕಾರ್ಯಗಳನ್ನು ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯವರು ಕೈಗೆತ್ತಿಕೊಳ್ಳಬಹುದು.

**ಸೋಮವಾರ ಪೇಟೆ ಪಟ್ಟಣ ಪಂಚಾಯ್ತಿಯ ನೀರು ಮತ್ತು ಚರಂಡಿ ವ್ಯವಸ್ಥೆ**

5(8) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕೊಡಗು ಜಿಲ್ಲೆ ಸೋಮವಾರ ಪೇಟೆ ಪಟ್ಟಣ ಪಂಚಾಯಿತಿಯ ಅಭಿವೃದ್ಧಿ ಹಾಗೂ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿಗಾಗಿ (ಸಂಪೂರ್ಣ ವ್ಯವಸ್ಥೆಗಾಗಿ) ಹಮ್ಮಿಕೊಂಡಿರುವ ಯೋಜನೆಗಳು ಯಾವ ಹಂತದಲ್ಲಿವೆ.

2. ಸದರಿ ಯೋಜನೆಯು ಕುಂಟುತ್ತ ಸಾಗಲು ಕಾರಣವೇನು?

3. ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ. ವಿವರ ನೀಡುವುದು.

4. ಇದಕ್ಕಾಗಿ ಇದುವರೆಗೆ ಖರ್ಚಾಗಿರುವ ಹಣವೆಷ್ಟು? ಎಷ್ಟು ಹಣ ಮಂಜೂರಾಗಿದೆ? ಯಾವಾಗ ಪೂರ್ಣಗೊಳಿಸಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲಾಗುವುದು?